**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **28/2018**

Form No.4(Civil)
Deposition Sheets
(R.P.No.57)

ಪಿ.ಡಬ್ಲ್ಯೂ ನಂಃ **11**
ಸಿ.ಡಬ್ಲ್ಯೂ ನಂಃ **18**
ಸಾಕ್ಷಿಯನ್ನು ದಿನಾಂಕಃ **04-08-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಪರಸಪ್ಪ |
| ತಂದೆಯ ಹೆಸರು | ಃ | ನಿಂಗಪ್ಪ |
| ವಯಸ್ಸು | ಃ | **48** ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ಚಳ್ಳಾರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಮೃತನ ಪರಿಚಯ ಇಲ್ಲ. ಆತ ಎಲ್ಲಿ ವಾಸ ಮಾಡುತ್ತಿದ್ದ ಹಾಗೂ ಯಾರ ಜೊತೆ ವಾಸ ಮಾಡುತ್ತಿದ್ದ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳ ಪರಿಚಯ ಸಹಾ ನನಗೆ ಇಲ್ಲ. ಈಗ್ಗೆ ಸುಮಾರು **8-9** ವರ್ಷಗಳ ಹಿಂದೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳು ಏನಾದರರೂ ಹಿಡಿದುಕೊಂಡು ಬರುತ್ತಿರುವುದನ್ನು ನಾನು ನೋಡಿಲ್ಲ. ಆರೋಪಿಗಳನ್ನು ನಾನು ಯಾವಾಗಲೂ ಮಾತನಾಡಿಸಿಲ್ಲ. ಹಿರೇಹನುಮಪ್ಪ ಹಾಗೂ ಆತನ ಮಗಳಿಗೆ ಏನಾಗಿತ್ತು ಎನ್ನುವ ಬಗ್ಗೆ ನನಗೇನೂ ಗೊತ್ತಿಲ್ಲ. ಯಾರಿಂದಲೂ ಈ ಕೇಸಿನ ಬಗ್ಗೆ ನನಗೆ ಯಾವುದೇ ವಿಚಾರ ತಿಳಿದು ಬಂದಿಲ್ಲ. ಈಗ ನ್ಯಾಯಾಲಯದ ಮುಂದೆ ತೋರಿಸಿದ ಎಂಒ **-1** ಮತ್ತು **2** ನ್ನು ನಾನು ಈ ಹಿಂದೆ ಯಾರ ಕೈನಲ್ಲೂ ನೋಡಿಲ್ಲ. ಪೊಲೀಸರ ಮುಂದೆ ಈಕೇ ಸಿಗೆಸಂಬಂ ಧಿಸಿದಂತೆ ಯಾವುದೇಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

**2).** ಮೃತ ಹಿರೇಹನುಮಪ್ಪ ಹಾಗೂ ಆತನ ಹೆಂಡತಿ ಮಕ್ಕಳು ತಿಮ್ಮಾಪುರ ಸೀಮಾದಲ್ಲಿ ಹೊಲದಲ್ಲಿ ಮನೆ ಮಾಡಿಕೊಂಡು ವಾಸ ಮಾಡುತ್ತಿರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸಾಕ್ಷಿ ಅವರ ಮನೆ ದೂರ ಆಗುತ್ತದೆ ಎನ್ನುತ್ತಾರೆ. ಮೃತ

ಹಿರೇಹನುಮಪ್ಪ 1 ನೇ ಆರೋಪಿಗೆ ಹೆಣ್ಣು ಹುಡುಕಿ ಮದುವೆ ಮಾಡಿಸಿದ್ದ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ತನ್ನ ಹೆಂಡತಿಯ ಜೊತೆ ಸರಿಯಾಗಿ ಸಂಸಾರ ಮಾಡದ ಕಾರಣ ಆಕೆ ಮೃತ ಹಿರೇಹನುಮಪ್ಪನ ಬಳಿ ಈ ಬಗ್ಗ ತಕರಾರು ಹೇಳುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಇದೇ ಕಾರಣಕ್ಕೆ 1 ನೇ ಆರೋಪಿ ಮ ೃತ ಹಿರೇನುಮಪ್ಪ ಆತನ ಹೆಂಡತಿಯ ಜೊತೆ ಅನೈತಿಕ ಸಂಬಂಧ ಹೊಂದಿದ್ದಾನೆ ಎಂದು ಗಲಾಟೆ ಮಾಡಿ ಜೀವ ಸಹಿತ ಮುಗಿಸುತ್ತೇನೆ ಎಂದು ಬಾಯಿ ಮಾಡುತ್ತಿದ್ದ ವಿಚಾರವನ್ನು 1 ನೇ ಆರೋಪಿ ನನಗೆ ತಿಳಿಸಿದ್ದ ಎಂದರೆ ಸರಿಯಲ್ಲ. ಮೃತನ ಹೆಂಡತಿ 2 ನೇ ಆರೋಪಿಯ ಹತ್ತಿರ ದೇವರು ಬರುತ್ತದೆ ಎಂದು ನಂಬಿ ಆತನನ್ನು ಕೇಳಲು ಹೋಗುತ್ತಿದ್ದು ಈ ವಿಚಾರವೂ ನನಗೆ ಗೊತ್ತಿದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುಸ್ತಾರೆ. ಮೃತ ಹನುಮಪ್ಪ 2 ನೇ ಆರೋಪಿಯನ್ನು ಕುರಿತು ಆತ ಡೊಂಗಿ ಬಾಬಾ ಅವನನ್ನು ನಂಬಬೇಡಾ ಆತನ ಬಳಿ ಹೋಗಬೇಡಾ ಎಂದು ಹೇಳುತ್ತಿದ್ದು ಆ ವಿಚಾರವನ್ನು ಮೃತ ನನ್ನ ಬಳಿ ಹೇಳುತ್ತಿದ್ದ ಎಂದರೆ ಸರಿಯಲ್ಲ.

**3).** ದಿಃ **30-9-2017** ರಂದು ಸಾಯಂಕಾಲ ನಾನು ಮೋಟರ ಸೈಕಲ್ಲ ಮೇಲೆ ಕೆಲಸದ ನಿಮಿತ್ಯ ಕುಷ್ಟಗಿಗೆ ಹೋಗಿದ್ದೆ ಎಂದರೆ ಸರಿಯಲ್ಲ. ಅದಾದ ನಂತರ ನನ್ನ ಕೆಲಸ ಮುಗಿಸಿಕೊಂಡು **1-10-2017** ರಂದು ಬೆಳಗಿನ ಜಾವ **2-30** ಗಂಟೆಗೆ ನಾನು ಚಳ್ಳಾರಿಗೆ ಹೋಗುವ ರಸ್ತೆಯಲ್ಲಿ ಬರುತ್ತಿದ್ದೆ ಎಂದರೆ ಸರಿಯಲ್ಲ. ಆಗ ತಿಮ್ಮಾಪುರದಿಂದ - ಗಂಗನಾಳಕ್ಕೆ ಹೋಗುವ ರಸ್ತೆ ಕ್ರಾಸ ಹತ್ತಿರ 2 ನೇ ಆರೋಪಿ ತನ್ನ ಕೈಯಲ್ಲಿ ಮುದ್ದೆಮಾಲು-2 ನ್ನು ಹಾಗೂ 1 ನೇ ಆರೋಪಿ ಮುದ್ದೆಮಾಲು-1 ನ್ನು ಹಿಡಿದುಕೊಂಡಿದ್ದರು ಎಂದರೆ ಸಾಕ್ಷಿ ನನಗೇನೂ ಗೊತ್ತಿಲ್ಲ ಎನ್ನುತ್ತಾರೆ. ಅವರಿಬ್ಬರು ಬರುತ್ತಿರುವುದನ್ನು ನಾನು ನನ್ನ ಮೋಟರ ಸೈಕಲ್ಲ ಮುಂಭಾಗದ ಲೈಟ ಬೆಳಕಿನಲ್ಲಿ ನೋಡಿ ಅವರನ್ನು ಗುರುತಿಸಿರುತ್ತೇನೆ ಎಂದರೆ ಸಾಕ್ಷಿ ತಾನು ತಮ್ಮ ಊರಿನಲ್ಲಿಯೇ ಇದ್ದು ತನಗೇನೂ ಗೊತ್ತಿಲ್ಲ ಎನ್ನುತ್ತಾರೆ. ನಾನು ಅವರನ್ನು ಮಾತನಾಡಿಸಿದಾಗ ಅವರು ಹೊಲಕ್ಕೆ ಹೋಗಿ ಬರುತ್ತಿದ್ದೇನೆ ಎಂಬ ವಿಚಾರ ತಿಳಿಸಿದ್ದು ಅವರುಗಳು ತೊಟ್ಟಿದ್ದ ಬಟ್ಟೆಗಳಿಗೂ ರಕ್ತ ಹತ್ತಿದ್ದನ್ನು ನೋಡಿರುತ್ತೇನೆ ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ನಾನು ಆರೋಪಿಗಳನ್ನು ಬಟ್ಟೆಗಳಿಗೆ ಏಕೆ ರಕ್ತ ಹತ್ತಿದೆ ಎಂದು ಕೇಳಿದಾಗ ಅವರು ದಾರಿಯಲ್ಲಿ ಕಾಡುಪ್ರಾಣಿಗಳು ಬಂದಿದ್ದು ಅವಕ್ಕೆ ತಾವು ಕೊಡಲಿ ಬಡಿಗೆಗಳಿಂದ ಹೊಡೆದೆವು ಹಾಗೂ ಅವುಗಳ ರಕ್ತ ತಮ್ಮ ಬಟ್ಟೆಗೆ ಹತ್ತಿರುತ್ತದೆವ ಂದು

ತಿಳಿಸಿದರು ಎಂದರೆ ಸಾಕ್ಷಿ ಏನೂ ಗೊತ್ತಿಲ್ಲ ಎನ್ನುತ್ತಾರೆ. ಆ ನಂತರ ನಾನು ನಮ್ಮ ಊರಿಗೆ ಹೊರಟುಹೋದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

**4).** ಅದೇ ದಿನ ಬೆಳಿಗ್ಗೆ **8** ಗಂಟೆಗೆ ನಾನು ಊರಿನಲ್ಲಿದ್ದಾಗ ಮೃತ ಹಿರೇಹನುಮಪ್ಪನಿಗೆ ಮತ್ತು ಅವನ ಮಗಳಿಗೆ ಯಾವುದೋ ಕಾಡುಪ್ರಾಣಿ ಕಡಿದಿರುತ್ತದೆ ಎಂಬ ವಿಚಾರ ನನಗೆ ತಿಳಿದುಬಂತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಾನು ಆ ನಂತರ ಅಲ್ಲಿಗೆ ಹೋಗಿ ನೋಡಿದಾಗ ಹಿರೇಹನುಮಪ್ಪ ತಲೆಗೆ ಗಾಯವಾಗಿ ರಕ್ತವಾಗಿ ಸತ್ತು ಬಿದ್ದಿರುವುದು ಕಂಡುಬಂತು ಅವನ ಮಗಳು ವಿಶಾಲಾಕ್ಷಿಗೂ ಮುಖ ಮತ್ತು ಹಣೆಗೂ ಗಾಯಗಳಾಗಿರುವುದು ಕಂಡು ಬಂತು ಎಂದರೆ ಸಾಕ್ಷಿ ಇಲ್ಲ ಗೊತ್ತಿಲ್ಲ ಎನ್ನುತ್ತಾರೆ. ಆ ನಂತರ ಈ ಬಗ್ಗೆ ಮೃತ ಹಿರೇಹನುಮಪ್ಪನ ಹೆಂಡತಿ ಫಿರ್ಯಾದಿ ಸಹಾ ಕೊಟ್ಟಿದ್ದು ಈ ವಿಚಾರ ಸಹಾ ನನಗೆ ಗೊತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಮೃತನ ಮಗಳು ವಿಶಾಲಾಕ್ಷಿಗೆ ಗಾಯವಾಗಿದ್ದರಿಂದ ಮಾನಸಿಕವಾಗಿ ಆಘಾತವಾದ ಕಾರಣ ಆ ವೇಳೆಗೆ ಅವಳು ಏನೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸಾಕ್ಷಿ ನನಗೆನೂ ಗೊತ್ತಿಲ್ಲ ಎನ್ನುತ್ತಾರೆ.

**5).** ದಿಃ **7-11-2017** ರಂದು ಮಧ್ಯಾಹ್ನ **2** ಗಂಟೆ ಸುಮಾರಿಗೆ ನಾನು ಊರಲ್ಲಿದ್ದಾಗ ಸದರಿ ವಿಶಾಲಾಕ್ಷಿಯು ಮಾನಸಿಕವಾಗಿ ಆರಾಮಾಗಿ ಅಂದಿನ ಘಟನೆಯ ಬಗ್ಗೆ ಹೇಳಿ ವಿಚಾರ ತಿಳಿಸಿರುತ್ತಾಳೆ ಎಂದು ಗೊತ್ತಾಯಿತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ಸುದ್ದಿ ಕೇಳಿ ನಾನು ಕೊಪ್ಪಳ ಪೊಲೀಸ ಠಾಣೆಗೆ ಹೋಗಿರುತ್ತೇನೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸ ಠಾಣೆಯಲ್ಲಿ ವಿಶಾಲಾಕ್ಷಿ ಆರೋಪಿಗಳಿಬ್ಬರೂ ತಮ್ಮ ಮನೆಗೆ ಬಂದು ರಾತ್ರಿ **2** ಗಂಟೆ ಸುಮಾರಿಗೆ ತಮ್ಮ ತಂದೆ ಮೃತರಿಗೆ ಹಾಗೂ ತನಗೆ ಹೊಡೆದರು ಎಂಬ ವಿಚಾರವನ್ನು ಪೊಲೀಸರಿಗೆ ತಿಳಿಸಿದಳು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಆ ವೇಳೆಗೆ ಮೃತನ ಮಗಳು **1** ನೇ ಆರೋಪಿ ತನ್ನ ಕೈಯಲ್ಲಿ ಮುದ್ದೆಮಾಲು-**1** ನ್ನು ಹಾಗೂ **2** ನೇ ಆರೋಪಿ ಮುದ್ದೆಮಾಲು-**2** ನ್ನು ಕೈಯಲ್ಲಿ ಹಿಡಿದು ತಂದು ತನ್ನ ತಂದೆ ಹಾಗೂ ತನಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿ ಆ ವೇಳೆಗೆ ತಾನು ಪ್ರಜ್ಞೆ ತಪ್ಪಿ ಬಿದ್ದೆ ಎಂದು ಸಹಾ ಹೇಳಿರುತ್ತಾಳೆ ಎಂದರೆ ಸಾಕ್ಷಿ ಗೊತ್ತಿಲ್ಲ, ತಾನು ನೋಡಿಲ್ಲ ಎನ್ನುತ್ತಾರೆ. ಮೃತನ ಮೇಲಿನ ಸಿಟ್ಟಿಗೆ ಆರೋಪಿಗಳಿಬ್ಬರೂ ಸೇರಿ ಆತನನ್ನು ಕೊಲೆ ಮಾಡಿರುವ ವಿಚಾರ ನನಗೆ ಗೊತ್ತಿದ್ದು ಈಬಗ್ಗೆ ಮೇಲೆ ಹೇಳಿದ ನಿಪಿ **15** ರಂತೆ ಪೊಲೀಸರಿಗೆ ಹೇಳಿಕೆ

ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಇಲ್ಲ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆರೋಪಿಗಳು ನನ್ನ ಪರಿಚಯಸ್ಥರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಲತಾ ಕುಮಾರಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂ: **28/2018**

Form No.4(Civil)
Deposition Sheets
(R.P.No.57)

ಪಿ.ಡಬ್ಲ್ಯೂ ನಂ: **10**
ಸಿ.ಡಬ್ಲ್ಯೂ ನಂ: **10**
ಸಾಕ್ಷಿಯನ್ನು ದಿನಾಂಕ: **04-08-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | : | ಫಕ್ರುದ್ದೀನ್ |
| ತಂದೆಯ ಹೆಸರು | : | ಯಮನೂರಸಾಬ |
| ವಯಸ್ಸು | : | **41** ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ತಳಕಲ್ಲ |

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ

ಈಗ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇದೆ. ಸಹಿಯನ್ನು ಗುರುತಿಸುವ ಸಲುವಾಗಿ ದಾಖಲಾತಿ ಜಪ್ತಿ ಪಂಚನಾಮೆಯನ್ನು ನಿಪಿ **14** ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ **14(ಎ)** ಎಂದು ಗುರುತಿಸಲಾಯಿತು. ದಿ: **1-10-2017** ರಂದು ಸದರಿ ಸಹಿಯನ್ನು ಕೊಪ್ಪಳ ಗ್ರಾಮಾಂತರ ಪೊಲೀಸ ಠಾಣೆಯಲ್ಲಿ ಮಾಡಿದ್ದೇನೆ. ಪೊಲೀಸರು ಮೃತನ ಬಟ್ಟೆಗಳನ್ನು ಪಂಚನಾಮೆ ಮಾಡಿ ಪಡೆದುಕೊಳ್ಳಬೇಕು ಎಂದು ನನ್ನನ್ನು ಕರೆದು ಗಣೇಶ ಎನ್ನುವ ಪಿಸಿ ಮೃತನ ಬಟ್ಟೆಗಳನ್ನು ಹಾಜರುಪಡಿಸಿದರು. ಪೊಲೀಸರು ತೋರಿಸಿದ ಬಟ್ಟೆಗಳಲ್ಲಿ ಒಂದು ಉದ್ದನೇ ತೋಳಿನ ಅಂಗಿ, ನೀಲಿ ಬಣ್ಣದ ರಕ್ತ ಹತ್ತಿದ ಬನಿಯನ್, ನಾಶಿ ಬಣ್ಣದ ಅಂಡರವಿಯರ್, ಒಂದು ಚುಕ್ಕೆಚುಕ್ಕೆ ಡಿಜೈನ ಇರುವ ಲುಂಗಿ ತೋರಿಸಿರುತ್ತಾರೆ. ಈ ಎಲ್ಲಾ ಬಟ್ಟೆಗಳಿಗೂ ನಾನು ನೋಡಿದ ಕಾಲಕ್ಕೆ ರಕ್ತ ಹತ್ತಿತ್ತು. ಈ ಎಲ್ಲಾ ಬಟ್ಟೆಗಳನ್ನು ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಒಂದು ಚೀಲದಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ. ಸಂಜೆ **4-30** ರಿಂದ ಸುಮಾರು ಒಂದು ತಾಸು **5-30** ರ ವರೆಗೂ ಪಂಚನಾಮೆ ಮಾಡಿರುತ್ತಾರೆ. ಪೊಲೀಸರು ಸ್ಥಳದಲ್ಲಿಯೇ ನಿಪಿ **14** ನ್ನು ಟೈಪ ಮಾಡಿ ಅದನ್ನು ಓದಿ ಹೇಳಿ ನನ್ನ ಸಹಿಪಡೆದು ಕೊಂಡಿರುತ್ತಾರೆ, ಆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನಾನು ನ್ಯಾಯಾಲಯದ ಮುಂದೆ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆಮಾಲು-**3** ರಿಂದ **6** ಎಂದು ಗುರುತಿಸಲಾಗಿದೆ. ನಿಪಿ **14** ನ್ನು ಮಾಡುವ ಕಾಲಕ್ಕೆ

ನನ್ನ ಜೊತೆ ರಮೇಶ /ಚಾಸಾ 11 ರವರು ಸಹಾ ಠಾಣೆಯಲ್ಲಿ ಹಾಜರಿದ್ದರು.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

**2).** ದಿಃ **1-10-2017** ರಂದು ಯಾವ ವಾರ ಇತ್ತು ಎಂದು ನನಗೆ ನೆನಪಿಲ್ಲ. ನನ್ನ ವೈಯಕ್ತಿಕ ಕೆಲಸದ ಮೇಲೆ ಆ ದಿನ ನಾನು ಕೊಪ್ಪಳ ಗ್ರಾಮೀಣ ಪೊಲೀಸ ಠಾಣೆಗೆ ಹೋಗಿದ್ದೆ. ನಾನು ವೈಯಕ್ತಿಕ ಕೆಲಸಕ್ಕೆ ಹೋದಂತಹ ಹಿನ್ನೆಲೆಯಲ್ಲಿ ನನ್ನ ಕೆಲಸದ ನಿಮಿತ್ಯ ಠಾಣೆಯಲ್ಲಿ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ **14** ರಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಅದನ್ನು ಪೊಲೀಸರು ತಮಗೆ ಓದಿ ಹೇಳಿದ್ದಾರೆ ಎನ್ನುತ್ತಾರೆ. ನಿಪಿ **14** ರಲ್ಲಿರುವ ವಿಚಾರವನ್ನು ಗಣೇಶರವರು ಹಾಗೂ ಅಲ್ಲಿ ಹಾಜರಿದ್ದ ಪೊಲೀಸರು ಹೇಳಿ ಬರೆಸಿದ್ದಾರೆ. ಉದ್ದ ತೋಳಿನ ಅಂಗಿ, ಒಂದುಬ ನಿಯನ್, ಒಂದು ನಾಶಿ ಬಣ್ಣದ ಅಂಡರವಿಯರ್, ಒಂದು ಚುಕ್ಕಿಚುಕ್ಕಿ ಡಿಜೈನಿನ ಲುಂಗಿ ಇತ್ತು. ನಾನು ಆ ದಿನ ಗ್ರಾಮೀಣ ಪೊಲೀಸ ಠಾಣೆಗೆ ವೈಯಕ್ತಿಕ ಕೆಲಸದ ಮೇಲೆ ಹೋಗಿದ್ದು ಪೊಲೀಸರು ನನ್ನ ಸಮಕ್ಷಮ ನಿಪಿ **14** ರಂತೆ ಜಪ್ತಿ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-**3** ರಿಂದ **6** ನ್ನು ಆವೇಳೆಗೆ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನ್ಯಾಯಾಲಯದ ಮುಂದೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು ಃ **1** ನೇ ಆರೋಪಿ ಪರವ ಕೀಲರಿಂದ.

**3).** ಈ ಪ್ರಕರಣವನ್ನು ಹೊರತುಪಡಿಸಿ ಈ ಹಿಂದೆ ನಾನು ಯಾವುದೇ ಪ್ರಕರಣದಲ್ಲೂ ಪಂಚನಾಮೆ ಸಾಕ್ಷಿಯಾಗಿ ಸಾಕ್ಷ್ಯ ನುಡಿದಿಲ್ಲ. ಪಂಚರಾಗಿ ಸಹಕರಿಸುವಂತೆ ಪೊಲೀಸ ಠಾಣೆಯಿಂದ ನನಗೆ ಯಾವುದೇ ನೋಟೀಸು ಬಂದಿರಲಿಲ್ಲ. ಆ ದಿನ ನಾನು ಕಂಪ್ಯೂಟರನಲ್ಲಿ ಟೈಪ ಮಾಡಿದಂತಹ ಒಂದು ದಾಖಲಾತಿಗೆ ಸಹಿ ಮಾಡಿದ್ದು, ಅದಲ್ಲದೇ ಮತ್ತೊಂದು ಸಹಿಯನ್ನು ಸಹಾ ಮಾಡಿದ್ದೇನೆ. **02** ಸಹಿಗಳನ್ನು ಎಲ್ಲಿ ಮಾಡಿದ್ದೇನೆ ಎಂದು ಹೇಳಲು ನಿಮಗೆ ನಿಖರವಾಗಿ ಸಾಧ್ಯವಿಲ್ಲ ಎಂದರೆ ಸಾಕ್ಷಿ ಎಲ್ಲಾ ಹೇಳಿದ್ದೇನೆ ಎನ್ನುತ್ತಾರೆ. ಒಂದು ಸಹಿಯನ್ನು ನಿಪಿ **14** ರಲ್ಲಿ ಮಾಡಿದ್ದು ಮತ್ತೊಂದು ಸಹಿಯನ್ನು ಪೊಲೀಸ ಠಾಣೆಯಲ್ಲಿ ಬುಕ್ ನಲ್ಲಿ ಮಾಡಿರಬಹುದು. ಅದು ಯಾವ ಪುಸ್ತಕ ಎಂದು ಹೇಳಲು ಬರುವುದಿಲ್ಲ. ಆ ವೇಳೆಗೆ ನನ್ನ ಜೊತೆ ಚಾಸಾ**11** ರವರು ಇದ್ದರು. ಚಾಸಾ **11** ರವರನ್ನು ಹೊರತುಪಡಿಸಿ ಸ್ಥಳದಲ್ಲಿ ಬೇರೋ

ಯಾರು ಇದ್ದರು ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲ. ಪೊಲೀಸರು ನಿಪಿ 14 ರಡಿ ಮುದ್ದೆಮಾಲು-3 ರಿಂದ 6 ನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡರು ಎಂದು ಹೇಳುತ್ತಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಈ ದಿನ ಪೊಲೀಸರು ಹೇಳಿಕೊಟ್ಟಂತೆ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಲತಾ ಕುಮಾರಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.